ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1974
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	16/03/2022
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಅಕ್ರಮವಾಗಿ ಗುತ್ತಿಗೆದಾರರ ನೋಂದಣಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;	ಹೌದು. ಲೋಕೋಪಯೋಗಿ ಇಲಾಖೆಯ 4 ವಲಯಗಳ ಪೈಕಿ ಉತ್ತರ ವಲಯದಲ್ಲಿ ಗುತ್ತಿಗೆದಾರರು ಸುಳ್ಳು ದಾಖಲೆ ನೀಡಿ 1ನೇ ಮತ್ತು 2ನೇ ದರ್ಜೆ ಗುತ್ತಿಗೆ ನೋಂದಣಿ/ ನವೀಕರಣ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಗುತ್ತಿಗೆದಾರರ ದಾಖಲೆಗಳ ದೃಢೀಕರಣದ ಸತ್ಯಾಸತ್ಯತೆ ಕುರಿತು ತನಿಖಾ ಕಾರ್ಯವು ಪರಿಶೀಲನಾ ಹಂತದಲ್ಲಿರುತ್ತದೆ.
ಆ)	ಯಾವ ವಲಯಗಳಲ್ಲಿ ಗುತ್ತಿಗೆದಾರರು ಸುಳ್ಳು ದಾಖಲೆಗಳನ್ನು ಸಲ್ಲಿಸಿ ನೋಂದಣಿ ನವೀಕರಣ ಪಡೆದಿದ್ದಾರೆ; ಮತ್ತು ಅಂತಹ ಗುತ್ತಿಗೆದಾರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)	
ಇ)	ಈ ಅಕ್ರಮದಲ್ಲಿ ಭಾಗಿಯಾದ ಅಧಿಕಾರಿ / ಸಿಬ್ಬಂದಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಗೆ ಒಳಪಟ್ಟು ಕ್ರಮ ಕೈಗೊಳ್ಳಲಾಗುವುದು; ಸರ್ಕಾರದ ಸ್ಪಷ್ಟ ನೀಲುವೇನು;	
ಈ)	ಈ ಕುರಿತು ತನಿಖೆ ಏನಾದರೂ ನಡೆಯುತ್ತಿದೆಯೇ; ಹಾಗಿದ್ದಲ್ಲಿ ತನಿಖೆ ಯಾವ – ಯಾವ ಹಂತದಲ್ಲಿ ಇದೆ; (ತನಿಖಾ ವರದಿಯ ಪ್ರತಿ ನೀಡುವುದು)	
ಉ)	ಸದರಿ ವರದಿಯ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?	

ಸಂಖ್ಯೆ: ಲೋಇ 09 ಬಿಎಲ್ ಕ್ಯೂ 2022

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು.